ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನ್ಸೂರ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು)

ಅ) ಬೇರೆ ರಾಜ್ಯಗಳ ಸಾಂಪ್ರದಾಯಿಕ ಹಾಗೂ ಗಣಕೀಕೃತ ನೆಟ್‌ವರ್ಕ್ ಲಾಟರಿ ಟಿಕೆಟ್‌ಗಳು ಕರ್ನಾಟಕ ರಾಜ್ಯದಲ್ಲಿ ಮಾರಾಟಗೊಳ್ಳುತ್ತಿವೆ

ಆ) ಲಾಟರಿ (ರೆಗ್ಯುಲೇಷನ್) ಆಕ್ಟ್ 98ರ ಅನ್ವಯ ಹೊರರಾಜ್ಯಗಳು ಕರ್ನಾಟಕ ರಾಜ್ಯದಲ್ಲಿ ಲಾಟರಿ ನಡೆಸಲು ಪರವಾನಗಿ ಪಡೆಯುವ ಅವಶ್ಯಕತೆ ಇರುವುದಿಲ್ಲ ಆದರೆ ಕರ್ನಾಟಕ ರಾಜ್ಯ ಲಾಟರಿ ನಿಯಮಾವಳಿಗಳು 1999ರ ಅನುಸಾರ ಅವರುಗಳು ಫಾರಂ–II ರಲ್ಲಿ ಮಾಹಿತಿಯನ್ನು ನೀಡಬೇಕು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಕರ್ನಾಟಕ ರಾಜ್ಯ ಸರ್ಕಾರವು ಅನಧಿಕೃತ ಲಾಟರಿಗಳನ್ನು ನಿಯಂತ್ರಿಸುವ ಸಲುವಾಗಿ 10 12 2003 ರಿಂದ ಜಾರಿಗೆ ಬರುವಂತೆ ಸುಗ್ರೀವಾಜ್ಞೆ ಹೊರಡಿಸಿ ಕರ್ನಾಟಕ ರಾಜ್ಯ ಲಾಟರಿಯೂ ಸೇರಿ ಎಲ್ಲಾ ಲಾಟರಿಗಳ ಮೇಲೆ ಬೆಟ್ಟಿಂಗ್ (ಲಾಟರಿ) ತೆರಿಗೆಯನ್ನು ವಿಧಿಸಲಾಗಿದೆ ಪ್ರತಿ ಡ್ರಾಗೆ ರೂ 1 ಲಕ್ಷ ಹಾಗೂ ಬಂಪರ್ ಡ್ರಾಗಳಿಗೆ ರೂ 1 5 ಲಕ್ಷ ತೆರಿಗೆ ಮೊತ್ತವನ್ನು ನಿಗದಿಪಡಿಸಿದೆ

ತಿಪಟೂರು ಕ್ಷೇತ್ರದಲ್ಲಿ ಹೊಸ ವಿದ್ಯುತ್ ಸ್ಥಾವರಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಬಗ್ಗೆ

72 (111) ಶ್ರೀ ಷಡಾಕ್ಷರಿ (ತಿಪಟೂರು) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಿಪಟೂರು ವಿಧಾನಸಭಾ ಕ್ಷೇತ್ರದಲ್ಲಿ ಎರಡು ವಿದ್ಯುತ್ ಸ್ಥಾವರಗಳು ಮಂಜೂರಾತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈ ಸ್ಥಾವರಗಳ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು

ಇ) ತಿಪಟೂರು ಉಪವಿಭಾಗದ ತಿಪಟೂರು ನಗರದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ

ಈ) ಹಾಗಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು, ಬಂದಿರುತ್ತದ ತಿಪಟೂರು ತಾಲ್ಲೂಕಿನ ಬಂಡಿಹಳ್ಳಿ ಮತ್ತು ಹುಣಸೆಘಟ್ಟ ಗ್ರಾಮಗಳಲ್ಲಿ ತಲಾ ಒಂದು 110 ಕೆ ವಿ ವಿದ್ಯುತ್ ಸಬ್‌ಸ್ಟೇಷನ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಈ ಸ್ಥಾವರಗಳ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಮುಳ್ಳು ತಂತಿ ಬೇಲಿಯನ್ನು ಹಾಕಲಾಗಿದೆ

ಆ) ಈ ಸಬ್ – ಸ್ಟೇಷನ್‌ಗಳ ಸ್ಥಾಪನೆಯ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗುವುದು ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆದ ನಂತರ ಈ ಕಾಮಗಾರಿಯ ಅಂದಾಜು ಪಟ್ಟಿ, ವಿವರವಾದ ಯೋಜನಾ ವರದಿ, ಆಡಳಿತಾತ್ಮಕ ಮಂಜೂರಾತಿ ಹಾಗೂ ಆರ್ಥಿಕ ವ್ಯವಸ್ಥೆಯಾದ

ನಂತರ "ಟರ್ನ್ ಕೀ" ಆಧಾರದಲ್ಲಿ ಕಾಮಗಾರಿಯ ನಿರ್ವಹಣೆಗಾಗಿ ಟೆಂಡರಿಂಗ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ

ಇ) ಇರುವುದಿಲ್ಲ

ಈ) ಆದ್ದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ

ಮೈಸೂರು ನಗರಕ್ಕೆ ಬೇಕಾಗಬಹುದಾದ ನೀರಿನ ಪ್ರಮಾಣವನ್ನು ಕುರಿತು

73 (284) ಶ್ರೀ ಶಂಕರಲಿಂಗೇಗೌಡ, ಹೆಚ್ ಎಸ್ (ಚಾಮರಾಜ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂದೆ ಮಳೆಗಾಲ ಬರುವವರೆಗೆ ಮೈಸೂರು ನಗರಕ್ಕೆ ಬೇಕಾಗಬಹುದಾದ ಕುಡಿಯುವ ನೀರಿನ ಪ್ರಮಾಣವನ್ನು ತಿಳಿಸುವುದು

ಆ) ಬೇಕಾಗಬಹುದಾದ ಪ್ರಮಾಣದಷ್ಟು ನೀರು ದೊರಕುವುದೇ

ಇ) ಹಾಗಾದಲ್ಲಿ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆ, ಪರಿಹಾರಕ್ಕೆ ಸರ್ಕಾರದ ಯಾವ ಯಾವ ಮುಂದಾಲೋಚನೆ ಕ್ರಮಗಳನ್ನು ಹಾಗೂ ಎಷ್ಟು ವೆಚ್ಚದಲ್ಲಿ ಕೈಗೊಳ್ಳುತ್ತದೆ?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಜನವರಿ 2004 ರಿಂದ ಜೂನ್ 2004 ರವರೆಗೆ 1 5 ಟಿ ಎಂ ಸಿ ನೀರಿನ ಅವಶ್ಯಕತೆ ಇರುತ್ತದೆ

ಆ) ಹಾಲಿ ಪರಿಸ್ಥಿತಿಯಲ್ಲಿ ಕೆ ಆರ್ ಎಸ್ ಜಲಾಶಯದಲ್ಲಿ ಬೇಕಾಗಿರುವ ನೀರಿನ ಪ್ರಮಾಣ ಲಭ್ಯವಿರುತ್ತದೆ

ಇ) ಹಾಲಿ ನದಿಯ ಪಾತ್ರದಿಂದ ನೇರವಾಗಿ ನೀರೆತ್ತುವ ವ್ಯವಸ್ಥೆಯು 12 00 ಎಂ ಜಿ ಗಳಾಗಿದ್ದು, ಉಳಿಕೆ 8 00 ಎಂ ಜಿ ನೀರೆತ್ತುವ ಕಾಮಗಾರಿ ಚಾಲನೆಯಲ್ಲಿದ್ದು ಮಾರ್ಚ್ 2004ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಇದರ ಅಂದಾಜು 85 00 ಲಕ್ಷ ರೂ ಗಳಾಗಿರುತ್ತದೆ

ಇದಲ್ಲದೆ ಮೇಳಾಪುರ 4ನೇ ಹಂತದ ನೀರು ಸರಬರಾಜು ಯೋಜನೆಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕಡಿಮೆಯಾದಾಗ ನದಿಗೆ ಅಡ್ಡಲಾಗಿ ಮರಳು ಮೂಟೆಯ ಒಡ್ಡು ನಿರ್ಮಿಸಲು ರೂ 1 30 ಲಕ್ಷಗಳ ಕಾಮಗಾರಿಗೆ ಟೆಂಡರ್ ಕರೆದು ಕಾಮಗಾರಿ ಒಂದು ವಾರದಲ್ಲಿ ಆರಂಭಿಸಲಾಗುವುದು

ನೀರಿನ ಪ್ರಮಾಣವು ಗಣನೀಯವಾಗಿ ಕಡಿಮೆಯಾದಾಗ ತುರ್ತು ಯಂತ್ರಾಗಾರವನ್ನು ಚಾಲನೆ ಮಾಡಲು ಕ್ರಮ ವಹಿಸಲಾಗುವುದು

ಅವಶ್ಯಕತೆ ಬಿದ್ದಲ್ಲಿ ನೀರು ಸರಬರಾಜು ಮಾಡಲು ಕನಿಷ್ಟ 30 ನೀರಿನ ಟ್ಯಾಂಕರ್‌ಗಳನ್ನು ತೆಗೆದುಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು

ದಿನಾಂಕ 26 12 2003 ರಂದು ಎಂ ಎ ಟಿ ಎಫ್ ನವರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕಾಡಾ ಕಛೇರಿಯಲ್ಲಿ ಚರ್ಚಿಸಿ ಜಿಲ್ಲಾಧಿಕಾರಿಗಳ ಉಸ್ತುವಾರಿಯಲ್ಲಿ ಪ್ರತಿ ತಿಂಗಳು ನೀರು ಸರಬರಾಜುವಿಗೆ ಸಂಬಂಧಪಟ್ಟಂತೆ ಸಭೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತೀರ್ಮಾನಿಸಿದೆ